ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 11.09.2024

ಪಾಟೀ ಸವಾಲು ಃ ವಾದಿ ಪರವಾಗಿ ಶ್ರೀ ಡಿ.ಸಿ.ಅರ್. ವಕೀಲರಿಂದಃ

ನಾನು 7 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ಬೋರೇಗೌಡ ಉಃಃ ಕೃಷ್ಣ ನನ್ನ ದೊಡ್ಡಪ್ಪನ ಮಗ. ಬೋರೇಗೌಡ ಉಃಃ ಕೃಷ್ಣ ರವರು ಕಿಡ್ನಿ ವೈಫಲ್ಯದಿಂದ ಮೃತರಾಗಿರುತ್ತಾರೆ. ಬೋರೇಗೌಡ ಉಃಃ ಕೃಷ್ಣ ರವರ ಪತ್ನಿಯ ಹೆಸರು ಕಾಳಮ್ಮ, ಅವರು ಜೀವತ ಇದ್ದಾರೆ. ಬೋರೇಗೌಡ ಉಃಃ ಕೃಷ್ಣ ಇಬ್ಬರು ಹೆಣ್ಣು ಮಕ್ಕಳು, 3 ಜನ ಗಂಡು ಮಕ್ಕಳು. ವರಲಕ್ಷ್ಮಿ, ಅಂಬಿಕಾ, ಕೃಷ್ಣೇಗೌಡ, ಜಗದೀಶ್, ಸದಾನಂದ ಬೋರೆಗೌಡರ ಮಕ್ಕಳು, ವಾದಿ ಹಾಗೂ 2 ರಿಂದ 5 ನೇ ಪ್ರತಿವಾದಿ ಹೊರತುಪಡಿಸಿ ಬೇರೇಗೌಡರಿಗೆ ಬೇರೆ ಯಾರು ವಾಸರುದಾರರು ಇರುವುದಿಲ್ಲ. ಬೋರೇಗೌಡ ಉಃಃ ಕೃಷ್ಣ ಅಸ್ತಿಯನ್ನು ನಾನು ನೋಡಿದ್ದೇನೆ. ಬೋರೇಗೌಡ ಇರುವ ಅಸ್ತಿಗಳು ಪಿತ್ರಾಜಿರ್ತ ಅಸ್ತಿ ಎಂದರೆ ಸರಿ. ಎಲ್ಲಾ ದಾವಾ ಸ್ವತ್ತುಗಳು ಬೋರೇಗೌಡ ಪಿತ್ರಾಜಿರ್ತ ಸ್ವತ್ತು ಎಂದರೆ ಸಾಕ್ಷಿ 2 ಸ್ವತ್ತು ಖರೀದಿ ಮಾಡಿದ್ದಾರೆ, ಅದರ ಸರ್ವೆ ನಂಬರ್ ಗೊತ್ತಿಲ್ಲ ಎನ್ನುತಾರೆ. ಬೋರೇಗೌಡ ಯಾವುದೇ ಸ್ವತ್ತುಗಳನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಸ್ವತ್ತುಗಳು ಬೋರೇಗೌಡ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಪಿತ್ರಾರ್ಜಿತ ಸ್ವತ್ತುಗಳಲ್ಲಿ ಅವರ ಎಲ್ಲಾ ಮಕ್ಕಳಿಗೂ ಭಾಗ ಬರುತ್ತದೆ ಎಂದರೆ ಸರಿ. ವಿಭಾಗಕ್ಕೆ ಸಂಬಧಪಟ್ಟಂತೆ ಮಾತುಕತೆ ಯಾವಾಗ ಅಯಿತ್ತು ಎಂದು ಈಗ ನನಗೆ ನೆನಪಿರವುದಿಲ್ಲ. ವಿಭಾಗದ ಮಾತುಕತೆಗೆ ಬೋರೇಗೌಡರ ಮಕ್ಕಳು, ನಾನು ಹಾಗೂ ಅಂಬಿಕಾ ರವರ ಪತ್ನಿ ಹಾಗೂ ಕರೀಗೌಡ, ವೆಂಕಟರಾಮು ಸೇರಿದ್ದೇವು. ಮಾತುಕತೆಯಾದ 3 ದಿವಸಗಳ ನಂತರ ಬರವಣಿಗೆಯಾಗಿರುತ್ತದೆ. ಮಾತುಕತೆಯಾದ ನಂತರ ಪತ್ರವನ್ನು 3 ನೇ ಪ್ರತಿವಾದಿ ಹಾಗೂ ಬೋರೇಗೌಡರು ತಂದಿರುತ್ತಾರೆ. ಬೋರೇಗೌಡರೇ ಪತ್ರ ಬರೆಯಲು ಮಾಹಿತಿ ಕೊಟ್ಟರು. ಪತ್ರವನ್ನು ಅನಂತರಾಮು ರವರು ಬರೆದಿರುತ್ತಾರೆ. ಅನಂತರಾಮುರವರನ್ನು ಬೋರೇಗೌಡರೇ ಕರೆದುಕೊಂಡು ಬಂದಿರುತ್ತಾರೆ. ಮಾತುಕತೆಯಾ ದಿನ ಯಾವುದೇ ಪತ್ರ ಬರೆದಿರುವುದಿಲ್ಲ, ಮನೆಯಲ್ಲಿ ಯಾರು ಸಹ ಸಹಿ ಮಾಡಿರುವುದಿಲ್ಲ.

*2)* ಆ ದಿನ ಪತ್ರವನ್ನು ಹಳೇಯ ತಾಲ್ಲೂಕು ಆಫೀಸಿನ ಬಳಿ ಬರೆಸಿರುತ್ತಾರೆ. ಪತ್ರ ಬರೆಯುವ ಸಮಯದಲ್ಲಿ ಬೋರೇಗೌಡರ ಹೆಣ್ಣು ಮಕ್ಕಳು ಬಂದಿರುವುದಿಲ್ಲ. ಸದರಿ ಪತ್ರಕ್ಕೆ ಬೋರೇಗೌಡರ ಹೆಣ್ಣು ಮಕ್ಕಳು ಸಹಿ ಮಾಡಿರುವುದಿಲ್ಲ. ನನ್ನ ಹಾಗೂ ಬೋರೇಗೌಡರ ಗಂಡು ಮಕ್ಕಳ ಸಂಬಂಧ ಚೆನ್ನಾಗಿದೆ. ಬೋರೇಗೌಡರು ಯಾವುದೇ ಪತ್ರ ಬರೆಸಿರುವುದಿಲ್ಲ ಎಂದರೆಸ ರಿಯಲ್ಲ. ಬೋರೇಗೌಡರು ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದ ಕಾರಣ ಉಪ ನೊಂದಾಣಿ ಕಛೇರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಪತ್ರ ಬರೆಯಲು ಬೋರೇಗೌಡರ ಅನಂತರಾಮು ರವರಿಗೆ ಮಾಹಿತಿ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪತ್ರದಲ್ಲಿ ಹೆಣ್ಣು ಮಕ್ಕಳಿಗೂ ಸಹ *2* ಗುಂಟೆ ಬರಬೇಕು ಎಂದು ನಮೂದು ಇರುತ್ತದೆ. ವಿಭಾಕ್ಕೆ ಸಂಬಧಪಟ್ಟಂತೆ ಯಾವುದೇ ಮಾತುಕತೆ ಅಗದೇ ಇದ್ದರೂ ಬೋರೆಗೌಡರ ಗಂಡು ಮಕ್ಕಳ ಮಾತುಕೇಳಿ ಸುಳ್ಳು ಸಾಕ್ಷಿ ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾತುಕತೆಗೆ ನಾನು ಹಾಗೂ ಊರಿನ ಜನರು ಸೇರಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ *22.02.2023* ರಂದು ಬೋರೇಗೌಡರು ಯಾವುದೇ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ಬೋರೆಗೌಡರು ಗಂಡು ಮಕ್ಕಳು ಸೃಷ್ಟಿ ಮಾಡಿರುವ ದಾಖಲಾತಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ವಿಭಾಗವಾಗದೇ ಇದ್ದರೂ ಸಹ ಬೋರೆಗೌಡರ ಗಂಡು ಮಕ್ಕಳು ಹಾಗೂ ನಾನು ದಾಖಲಾತಿಯನ್ನು ಸೃಷ್ಟಿ ಮಾಡಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ ವಿಭಾಗವಾಗದೇ ಇದ್ದರೂ ಸಹ ಹೆಣ್ಣು ಮಕ್ಕಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ದಾಖಲಾತಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಿಭಾಗ ಪಒತ್ರಕ್ಕೆ ಬೋರೇಗೌಡರ ಹೆಣ್ಣು ಮಕ್ಕಳು ಸಹಿ ಮಾಡದೇ ಇರುವ ಕಾರಣ ಅದು ಬಾದ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರಮಾಣಪತ್ರದ ಸಂಗತಿಗಳಿಗೆ ನಾನು ಮಾಹಿತಿ ನೀಡಿರುವುದಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೋರೇಗೌಡರ ಗಂಡು ಮಕ್ಕಳು ನನಗೆ ಸಹಾಯ ಮಾಡುವ ಕಾರಣ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೋರೇಗೌಡರ ಗಂಡು ಮಕ್ಕಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ವಿಭಾಗಪತ್ರವನ್ನು ಬೋರೇಗೌಡರ ಗಂಡು ಮಕ್ಕಳು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.

ಓ ಹೇ ಕೇ ಸ ಇ ಒ

*(ಶ್ರೀಮತಿ ಕೆ.ಲಕ್ಷ್ಮಿ)*
1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ., ಮಂಡ್ಯ.